ಗೌರವನಲ್ಲಿ ತಾನೇ ಮಾತಾಡಿ ಈ ಸಮಸ್ಯೆಯನ್ನು ಸೂಕ್ತವಾಗಿ ನಿಭಾಯಿಸಬಹುದಿತ್ತು. ಶರ್ಮಾ ಹಾಗೆ ಮಾಡಲಿಲ್ಲ, ಬೋರ್ಡಿಗೆ ತಂದಿದ್ದಾರೆ. ತನಗಿನ್ನು ಎರಡುವರ್ಷ, ಅಂದರೆ ಇಪ್ಪತ್ತನಾಲ್ಕು ತಿಂಗಳು, ಅಂದರೆ ಸುಮಾರು ಏಳುನೂರು ದಿನಗಳು... ಎಂದು ಆತ ದಿನಲೆಕ್ಕ ಮಾಡಲು ಶುರುವಿಟ್ಟುಕೊಂಡಿದ್ದಾರೆ. ಹಾಗಾಗಿ ನಿನ್ನ ಅಭಿಪ್ರಾಯ ನಮಗೆ ಮುಖ್ಯವಾಗಿದೆ. ಗೌರವನ ರಾಜೀನಾಮೆ ವಿಚಾರದಲ್ಲಿ ನಿನ್ನ ಖಚಿತ ಅಭಿಪ್ರಾಯ ಏನು?' ಕೇಳಿದರು ಚೇರ್ಮನ್.

ಸೀದಾ ಸಾದಾ ಪ್ರಶ್ನೆ. ಅದಕ್ಕೆ ಸೀದಾ ಸಾದಾ ಉತ್ತರ ಹೇಳಿಬಿಡಲೇ? ಯೋಚಿಸಿದ ಮೆನನ್.

'ಕುದುರೆಗೆಷ್ಟು ಕಾಲು?' ಈ ಪ್ರಶ್ನೆ 'ನಾಲ್ಕು' ಎಂದು ಉತ್ತರ ನೀಡುವವರಿಗೆ ಅಲ್ಲವೇ ಅಲ್ಲ. 'ಮೂರು' ಎಂದು ಹೇಳಿ ಅದನ್ನು ವಿವರಿಸಿ ಸಾಬೀತು ಪಡಿಸುವವರಿಗೆ ಮಾತ್ರ. ಪ್ರಶ್ನೆ ಯಾಕೆ ಕೇಳಿದ್ದಾರೆ ಎಂದು ಅರ್ಥಮಾಡಿಕೊಂಡು ಅವರು ಕೇಳಲು ಇಷ್ಟಪಡುವ ಉತ್ತರ ನೀಡುವ ಸಾಮರ್ಥ್ಯವಂತರು ಮಾತ್ರ ಬದುಕುಳಿಯುತ್ತಾರೆ. ಅವರಿಗೆ ತನ್ನಿಂದ ಬೇಕಾಗಿರುವುದು 'ಗೌರವ್ ಹೋದರೆ ಹೋಗಲಿ, ನಾನು ನಿಭಾಯಿಸುತ್ತೇನೆ' ಎನ್ನುವ ಉತ್ತರ. ಹಾಗೆ ಹೇಳಿದರೆ ತಾನಿನ್ನೂ ಗೌರವನಿಗಿಂತ ಹೆಚ್ಚು ಸಾಮರ್ಥ್ಯ ಉಳ್ಳವನು ಎಂದು ಬಿಂಬಿಸಿದ ಹಾಗಾಗುತ್ತೆ. ಆದರೆ ಫಲಿತಾಂಶ? ಗೌರವನನ್ನು ಇವರು ಹೋಗು ಅನ್ನಬಹುದು. ಆಗ ಅಸಾಧ್ಯ ಕೆಲಸದ ಒತ್ತಡ ತನ್ನ ಮೇಲೆ ಬರುತ್ತೆ. ತನಗೆ ಅಲ್ಪ ಇನ್‌ಕ್ರಿಮೆಂಟೂ ಬರಬಹುದು. 'ಗೌರವ್ ತೀರಾ ಅಗತ್ಯ, ಹೇಗಾದರೂ ಉಳಿಸಿಕೊಳ್ಳಿ' ಎಂದು ತಾನು ಹೇಳಿದರೆ ಗೌರವ್ ತನಗಿಂತಲೂ ಹೆಚ್ಚು ಸಮರ್ಥ ಅಂತ ತಾನೇ ಒಪ್ಪಿಕೊಂಡ ಹಾಗೆ ಆಗುತ್ತೆ. ಬೋರ್ಡಿನಲ್ಲಿ ಗೌರವನನ್ನು ಉಳಿಸಿಕೊಳ್ಳುವ ನಿರ್ಧಾರವಾದರೆ ಆತನಿಗೆ ತನಗಿಂತ ಹೆಚ್ಚು ವೇತನ ನಿಗದಿ ಪಡಿಸುವಲ್ಲಿ ಮ್ಯಾನೇಜ್‌ಮೆಂಟಿಗೆ ಯಾವ ತಲೆಬೇನೆಯೂ ಇರುವುದಿಲ್ಲ.

ಎರಡು ಸಂಭವಗಳೂ ತನಗೆ ಪ್ರತಿಕೂಲವೇ! ಶರ್ಮಾರಿಗೆ ಹೇಳಿದ ಮಾತು ಇಲ್ಲಿ ನಡೆಯುವುದಿಲ್ಲ! ಯೋಚಿಸಿದ ಮೆನನ್.

'ಏನು ಅಷ್ಟು ಯೋಚಿಸುತ್ತಿದ್ದೀ? ಗೌರವ್ ನಮಗೆ ತೀರಾ ಅಗತ್ಯವೋ ಅಥವಾ ಆತ ಇಲ್ಲದಿದ್ದರೂ ಸುಧಾರಿಸಬಹುದೋ?' ಚೇರ್ಮನ್ ತಮ್ಮ ಪ್ರಶ್ನೆಯನ್ನು ಇನ್ನೂ ಸುಲಭವಾಗಿಸಿದರು.

ಈ ಪ್ರಕರಣದಲ್ಲಿ ತಲೆಹಾಕಿದಾಗಲೇ ಇದು ತನ್ನನ್ನು ಇಂತಹ ಪ್ರಶ್ನೆಯೊಂದಕ್ಕೆ ಉತ್ತರಿಸಬೇಕಾದ ಅನಿವಾರ್ಯತೆಗೆ ತಂದು ನಿಲ್ಲಿಸುತ್ತದೆ ಎಂದು ಚೆನ್ನಾಗಿ ಅರಿತಿದ್ದ ಮೆನನ್. ಪ್ರಕರಣ ತನ್ನ ಗಮನಕ್ಕೆ ಬಂದೊಡನೆಯೇ ತಾನೇ ಅದನ್ನು ಈ ಮಟ್ಟಕ್ಕೆ ಎತ್ತಿ ಹಾಕಿದ್ದ ಅಂದರೂ ಸರಿಯೇ! ಶೂನ್ಯದಲ್ಲಿ ಅವಕಾಶ ಸೃಷ್ಟಿಸುವುದು ಅಂದರೆ ಹೀಗೆ! ಮೆನನ್ ತನ್ನ ಗಂಟಲು ಸರಿಪಡಿಸಿಕೊಂಡು ಮಾತು ಆರಂಭಿಸಿದ. 'ಪ್ರಶ್ನೆ ಗೌರವ್ ಇಲ್ಲದಿದ್ದರೂ ಸುಧಾರಿಸಬಹುದೇ ಎಂದಾದರೆ 'ಪರವಾಗಿಲ್ಲ, ಸುಧಾರಿಸುತ್ತೇನೆ' ಎಂದೇ ಹೇಳಬಲ್ಲೆ. ಆದರೆ ಪ್ರಶ್ನೆ ಅದಲ್ಲ... ಕಂಪೆನಿ ಗೌರವ್ ಇಲ್ಲದೆಹೋದ ಪಕ್ಷದಲ್ಲಿ ಈಗಿರುವ ಬೆಳವಣಿಗೆಯನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವೇ ಎಂದು ಕೇಳುವುದಾದರೆ ಯೋಚಿಸಬೇಕಾದ ಅಗತ್ಯ ಇದೆ. ಬೆಳವಣಿಗೆಗೆ ಪೂರಕವಾಗಿ ಉದ್ಯೋಗಿಗಳ ಅಗತ್ಯ ಇದ್ದೇ ಇರುತ್ತದೆ. ಗೌರವನ ಸ್ಥಾನಕ್ಕೆ ಇನ್ನೊಬ್ಬ ಹುಡುಗನನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಸದ್ಯದ ವೇತನಮಟ್ಟದಲ್ಲಿ ಹೊಸಬರೂ ಸುಲಭದಲ್ಲಿ ದೊರೆಯುವುದಿಲ್ಲ. ಇನ್ನು ನಮಗೆ ದೊರಕಿದ ಹುಡುಗ ಗೌರವನ ಸಾಮರ್ಥ್ಯಕ್ಕೆ ತಲುಪಬಲ್ಲನೇ, ಎಷ್ಟು ಸಮಯ ತೆಗೆದುಕೊಳ್ಳುತ್ತಾನೆ ಇವೆಲ್ಲ ಯಕ್ಷಪ್ರಶ್ನೆಗಳು. ಶರ್ಮಾರು ಬೇರೆ